KACD310015242021

Presented on : 08.07.2021
Registered on : 08.07.2021
Decided on : 01.06.2026
Duration : 04 y/10 m/24days

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು.

ಉಪಸ್ಥಿತರುಃ– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು.

**ಸಿ ಸಿ. ನಂಬರ್ 1168/2021**

ದಿನಾಂಕಃ 1 ನೇ ಜೂನ್ – 2026.

ಪಿರ್ಯಾದಿ ಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
ಆರಕ್ಷಕರು, ಹಿರಿಯೂರು
(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

ಆರೋಪಿತರು ಃ **ಬೊಪ್ಪರಾಯ**
ತಂದೆ ರತ್ನಪ್ಪ, 35 ವರ್ಷ,
ವಾಸಃ ಕೃಷ್ಣಪುರ ಗ್ರಾಮ,
ಧರ್ಮಪುರ ಹೋಬಳಿ,
ಹಿರಿಯೂರು ತಾಲ್ಲೂಕು.

(ಆರೋಪಿತರ ಪರವಾಗಿಃ ಶ್ರೀಮತಿ ಎಂ.ಎಂ., ವಕೀಲರು)

SUJATHA SUVARNA B
Digitally signed by SUJATHA SUVARNA B
Date: 2026.06.06 13:49:44 +0530

| | | |
|---|---|---|
| ಆರೋಪಿಸಲ್ಪಟ್ಟ ಅಪಾದನೆ | ಃ | ಭಾ.ಧ.ಸಂ ಕಲಂ 323, 504, 506, 498(ಎ) ಹಾಗೂ 3 ಮತ್ತು 4 ಡಿ.ಪಿ .ಆಕ್ಟ್ |
| ಆರೋಪದ ದಿನಾಂಕ | ಃ | 21.04.2020 |
| ಆರೋಪ ದಾಖಲಾದ ದಿನಾಂಕ | ಃ | 07.05.2020 |
| ಸಾಕ್ಷ್ಯಪ್ರಾರಂಭದ ದಿನಾಂಕ | ಃ | 06.04.2026 |
| ಸಾಕ್ಷ್ಯಮುಕ್ತಾಯ ಗೊಂಡ ದಿನಾಂಕ | ಃ | 06.04.2026 |
| ತೀರ್ಪು ಘೋಷಿಸಿದ ದಿನಾಂಕ | ಃ | 01.06.2026 |
| ನ್ಯಾಯಾಧೀಶರ ನಿರ್ಣಯ | ಃ | ಅಂತಿಮ ಆದೇಶ |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

## ತೀರ್ಪು

ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ ವೃತ್ತ ನಿರೀಕ್ಷರು ಆರೋಪಿಯ ವಿರುದ್ಧ ಭಾ.ಧ.ಸಂ ಕಲಂ 323, 504, 506, 498(ಎ) ಹಾಗೂ 3 ಮತ್ತು 4 ಡಿ. ಪಿ ಆಕ್ಟ್ ರಡಿಯಲ್ಲಿ ದಂಡಿಸಬಹುದಾದ ಕೃತ್ಯಗಳನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕಳಕಂಡಂತಿರುತ್ತವೆ.

ಚಾಸಾ.2 ಮತ್ತು 3 ರವರು 1 ನೇ ಆರೋಪಿತನೊಂದಿಗೆ ಮದುವೆ ಮಾತುಕತೆ ಮಾಡಿದ್ದು 1 ನೇ ಆರೋಪಿತನು ವರದಕ್ಷಿಣೆಯಾಗಿ ಬಂಗಾರದ ಕೊರಳ ಚೈನು, ಉಂಗುರ ಮತ್ತು 4 ಜೊತೆ ಬಟ್ಟೆ ಕೊಡಲು ಬೇಡಿಕೆ ಇಟ್ಟಿದ್ದು ಚಾಸಾ.2 ರವರು ಮದುವೆ ಕಾಲದಲ್ಲಿ ವರದಕ್ಷಿಣೆಯಾಗಿ

ಬಂಗಾರದ ಕೊರಳ ಚೈನು ಉಂಗುರ ಮತ್ತು 4 ಜೊತೆ ಬಟ್ಟೆ ಕೊಟ್ಟು 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ದಿನಾಂಕ 26.11.2017 ರಂದು ಗುರು ಹಿರಿಯರ ಸಮ್ಮುಖದಲ್ಲಿ ಧರ್ಮಪುರ ಗ್ರಾಮದ ವಾಸವಿ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿಕೊಟ್ಟಿದ್ದು ನಂತರ 1 ನೇ ಆರೋಪಿತರು ಚಾಸಾ.1 ರವರೊಂದಿಗೆ ಬೆಂಗಳೂರಿನ ವೈಟ್ ಪೀಲ್ಡ್ ಹತ್ತಿರದ ಬಾಡಿಗೆ ಮನೆ ಮಾಡಿಕೊಂಡು ಇರುವಾಗ 1 ನೇ ಆರೋಪಿತನು ಚಾಸಾ.1 ರವರಿಗೆ ಗಲಾಟೆ ಮಾಡುವುದು ಹೊಡೆಯುವುದು ಮಾಡಿದ್ದರಿಂದ ಚಾಸಾ.2, 3 ರವರು ಚಾಸಾ.1 ರವರಿಗೆ ತವರು ಮನೆಗೆ ಕರೆದುಕೊಂಡು ಬಂದು ಇಟ್ಟುಕೊಂಡಿರುವಾಗ 1 ನೇ ಆರೋಪಿತರು ಚಾಸಾ.1 ರವರಿಗೆ ಮದುವೆಯ ಕಾಲಕ್ಕೆ ವರದಕ್ಷಿಣೆ ನೀಡಿಲ್ಲವೆಂದು ತನ್ನ 5 ಲಕ್ಷ ರೂಪಾಯಿಗಳ ಸಾಲವನ್ನು ತೀರಿಸಲು, ತವರು ಮನೆಯಿಂದ ಹಣವನ್ನು ತರಲು ಹೇಳಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದು ದಿನಾಂಕ 21.04.2020 ರಂದು ಮಧ್ಯಾಹ್ನ 3 ರ ಸಮಯದಲ್ಲಿ ಕುಡಿದು ಬಂದು ಚಾಸಾ.1, 2 ಮತ್ತು 3 ರವರಿಗೆ 2 ಲಕ್ಷ ರೂಪಾಯಿಗಳ ಹಣ ಕೊಡುವಂತೆ ಗಲಾಟೆ ಮಾಡಿ ಸೂಳೆ ಮುಂಡೆ ಬೋಳಿಮುಂಡೆ ಎಂದು ಬೈದಾಡಿದ್ದು , ಚಾಸಾ.1 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಹಾಗೂ ಚಾಸಾ.1 ರವರಿಗೆ ಕುತ್ತಿಗೆ ಹಿಸುಕಿ ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಪಿರ್ಯಾದಿದಾರರು ದೂರು ನೀಡಿದ್ದು ಸದರಿ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಮಾಡಿ ಆರೋಪಿಗಳು ಭಾರತೀಯ ದಂಡ ಸಂಹಿತೆಯ ಕಲಂ 323, 504, 506, 498(ಎ) ಹಾಗೂ 3 ಮತ್ತು 4 ಡಿ. ಪಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ದೋಷಾರೋಪಣಾಪಟ್ಟಿ ಸಲ್ಲಿಸಲಾಗಿರುತ್ತದೆ.

3. ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೆಯನ್ನು

ತೆಗೆದುಕೊಂಡು ಆರೋಪಿಯ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ ಮೇಲ್ಕಂಡ ಆರೋಪಿಯು ಹಾಜರಾತಿಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ನಂತರ ಆರೋಪಿಗೆ ದೋಷಾರೋಪಣ ಪಟ್ಟಿ ಹಾಗೂ ಅದರ ಲಗತ್ತಿಸಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ನೀಡಲಾಗಿದೆ. ಆರೋಪಿಯ ವಿರುದ್ಧ ಕಲಂ 323, 504, 506, 498(ಎ) ಹಾಗೂ 3 ಮತ್ತು 4 ಡಿ.ಪಿ. ಆಕ್ಟ್ ರಡಿಯಲ್ಲಿ ರೀತ್ಯಾ ದೋಷಾರೋಪಣೆಯನ್ನು ರಚಿಸಿ ಆರೋಪಿಗಳಿಗೆ ಓದಿ ಹೇಳಲಾಗಿ ಆರೋಪಿಯು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡರು.

4. ಅಭಿಯೋಜನಾ ಪಕ್ಷದವರು ತಮ್ಮ ಈ ಪ್ರಕರಣದ ಸಮರ್ಥನೆಗಾಗಿ ಚಾಸಾ-1 ರಿಂದ ಚಾಸಾ.14 ರ ಪೈಕಿ ಚಾಸಾ.1 ರಿಂದ 3 ರವರನ್ನು ಪ್ರಾಸಾ.1 ರಿಂದ 3 ಎಂದು ಸಾಕ್ಷಿ ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ನಿಪಿ.1 ರಿಂದ 6 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯವರ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿಯ ವಿರುದ್ಧ ಯಾವುದೇ ರೀತಿಯ ದಂಡನಾರ್ಹವಾದ ಸಾಕ್ಷ್ಯ ಒದಗಿಸದೇ ಇರುವುದರಿಂದ ದಂ.ಪ್ರ.ಸಂ. ಕಲಂ 313 ಅಡಿಯಲ್ಲಿ ಮಾಡಬೇಕಾಗಿದ್ದ ಆರೋಪಿಯ ಹೇಳಿಕೆಯನ್ನು ಕೈಬಿಡಲಾಗಿದೆ. ಆರೋಪಿಯ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆ ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

5. ಉಭಯ ಪಕ್ಷಕಾರರ ಪರ ಮಂಡಿಸಿದ ವಾದ ವಿವಾದಗಳನ್ನು ಅಲಿಸಲಾಗಿದೆ ಹಾಗೂ ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿದೆ.

6. ಈ ಹಿನ್ನಲೆಯಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆ

1. ಅಭಿಯೋಜನೆಯವರು ಆರೋಪಿಯು ಚಾಸಾ.1 ರವರನ್ನು ಮದುವೆಯಾದ ಸಮಯದಲ್ಲಿ ವರದಕ್ಷಿಣೆಯಾಗಿ ಬಂಗಾರದ ಕೊರಳ

ಚೈನು ಉಂಗುರ ಮತ್ತು 4 ಜೊತೆ ಬಟ್ಟೆ ಕೊಡಲು ಬೇಡಿಕೆ ಇಟ್ಟಿದ್ದು ಹಾಗೂ ದಿಃ 26.11.2017 ರಂದು ಮದುವೆಯಾದ ನಂತರ ಚಾಸಾ.1 ರವರಿಗೆ ಮದುವೆ ಕಾಲಕ್ಕೆ ವರದಕ್ಷಿಣೆ ನೀಡಿಲ್ಲವೆಂದು ತವರು ಮನೆಯಿಂದ ತನ್ನ ಸಾಲ 5 ಲಕ್ಷ ರುಾಪಾಯಿಗಳನ್ನು ಪಾವತಿಸಲು ಹಣವನ್ನು ತರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ಭಾ.ದಂ.ಸಂ.ಕಲಂ.498(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಅಭಿಯೋಜನೆಯವರು ಆರೋಪಿಯು ಮದುವೆಯ ಸಮಯದಲ್ಲಿ ವರದಕ್ಷಿಣೆಯಾಗಿ ಬಂಗಾರದ ಕೊರಳ ಚೈನು ಉಂಗುರ ಮತ್ತು 4 ಜೊತೆ ಬಟ್ಟೆ ಕೊಡಲು ಬೇಡಿಕೆ ಇಟ್ಟಿದ್ದು ಮದುವೆಯಾದ ನಂತರ ಚಾಸಾ.1 ರವರಿಗೆ ವರದಕ್ಷಿಣೆ ನೀಡಿಲ್ಲವೆಂದು 5 ಲಕ್ಷ ರೂಪಾಯಿಗಳ ಸಾಲ ತೀರಿಸಲು ಹಣ ತರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ದಿಃ21.04.2020 ರಂದು ಮಧ್ಯಾಹ್ನ 3 ರ ಸಮಯದಲ್ಲಿ ಕುಡಿದು ಬಂದು ಚಾಸಾ.1, 2 ಮತ್ತು 3 ರವರಿಗೆ 2 ಲಕ್ಷ ಹಣ ಕೊಡುವಂತೆ ಗಲಾಟೆ ಮಾಡಿ ಸೂಳೆ ಮುಂಡೆ ಬೋಳಿಮುಂಡೆ ಎಂದು ಬೈದಾಡಿ ಕಲಂ 3 ಮತ್ತು 4 ವರದಕ್ಷಿಣೆ ನಿಷೇದ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಅಭಿಯೋಜನೆಯು ದಿನಾಂಕ 21.04.2020 ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಬಬ್ಬೂರು ಗ್ರಾಮ ಚಾಸಾ.1 ರವರ ಮನೆಗೆ ಆರೋಪಿಯು ಕುಡಿದು ಬಂದು ಚಾಸಾ.1 ಮತ್ತು ಅವರ ತಂದೆ ತಾಯಿಗಳಿಗೆ ಸೂಳೆ ಮುಂಡೆ ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಭಾ.ದಂ.ಸಂ. ಕಲಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ.1 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ನೋವುಂಟುಪಡಿಸಿದ್ದು ಭಾ.ದಂ.ಸಂ.ಕಲಂ.323 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ.1 ರವರಿಗೆ ಕುತ್ತಿಗೆ ಹಿಸುಕಿ ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಭಾ.ದಂ.ಸಂ.ಕಲಂ.506 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

6. ಆದೇಶ ಏನು ?

7. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆಃ–

| | | |
|---|---|---|
| ಅಂಶ ನಂ.1 ರಿಂದ 5 | ಃ | ನಕಾರಾತ್ಮಕವಾಗಿ |
| ಅಂಶ ನಂ.6 | ಃ | ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ |

**ಕಾರಣಗಳುಃಃ**

8. **ಅಂಶ ನಂ.1 ರಿಂದ 5ಃ** ಸದರಿ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

ಈ ಪ್ರಕರಣದಲ್ಲಿ ಅಭಿಯೋಜನೆಯು ರುಜುವಾತುಪಡಿಸಬೇಕಾಗಿರುವ ಅಂಶಗಳೆಂದರೆ, ಚಾಸಾ.2 ಮತ್ತು 3 ರವರು 1 ನೇ ಆರೋಪಿತನೊಂದಿಗೆ ಮದುವೆ ಮಾತುಕತೆ ಮಾಡಿದ್ದು 1 ನೇ ಆರೋಪಿತನು ವರದಕ್ಷಿಣೆಯಾಗಿ ಬಂಗಾರದ ಕೊರಳ ಚೈನು, ಉಂಗುರ ಮತ್ತು 4 ಜೊತೆ ಬಟ್ಟೆ ಕೊಡಲು ಬೇಡಿಕೆ ಇಟ್ಟಿದ್ದು ಚಾಸಾ.2 ರವರು ಮದುವೆ ಕಾಲದಲ್ಲಿ ವರದಕ್ಷಿಣೆಯಾಗಿ ಬಂಗಾರದ ಕೊರಳ ಚೈನು ಉಂಗುರ ಮತ್ತು 4 ಜೊತೆ ಬಟ್ಟೆ ಕೊಟ್ಟು 5 ಲಕ್ಷ ಖರ್ಚು ಮಾಡಿ ದಿನಾಂಕ 26.11.2017 ರಂದು ಗುರು ಹಿರಿಯರ ಸಮ್ಮುಖದಲ್ಲಿ ಧರ್ಮಪುರ ಗ್ರಾಮದ ವಾಸವಿ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿಕೊಟ್ಟಿದ್ದು ನಂತರ 1 ನೇ ಆರೋಪಿತರು ಚಾಸಾ.1 ರವರೊಂದಿಗೆ ಬೆಂಗಳೂರಿನ ವೈಟ್ ಫೀಲ್ಡ್ ಹತ್ತಿರದ ಬಾಡಿಗೆ ಮನೆ ಮಾಡಿಕೊಂಡು ಇರುವಾಗ 1 ನೇ ಆರೋಪಿತನು ಚಾಸಾ.1 ರವರಿಗೆ ಗಲಾಟೆ ಮಾಡುವುದು ಹೊಡೆಯುವುದು ಮಾಡಿದ್ದರಿಂದ ಚಾಸಾ.2, 3 ರವರು ಚಾಸಾ.1 ರವರಿಗೆ ತವರು ಮನೆಗೆ ಕರೆದುಕೊಂಡು ಬಂದು ಇಟ್ಟುಕೊಂಡಿರುವಾಗ 1 ನೇ ಆರೋಪಿತರು ಚಾಸಾ.1 ರವರಿಗೆ ಮದುವೆಯ ಕಾಲಕ್ಕೆ ವರದಿಕ್ಷಿಣೆ ನೀಡಿಲ್ಲವೆಂದು ತನ್ನ 5 ಲಕ್ಷ ಸಾಲವನ್ನು ತೀರಿಸಲು ತವರು ಮನೆಯಿಂದ ಹಣವನ್ನು ತರಲು ಹೇಳಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದು ದಿನಾಂಕ 21.04.2020 ರಂದು ಮಧ್ಯಾಹ್ನ 3 ರ ಸಮಯದಲ್ಲಿ ಕುಡಿದು ಬಂದು ಚಾಸಾ.1, 2 ಮತ್ತು 3 ರವರಿಗೆ 2 ಲಕ್ಷ ಹಣ ಕೊಡುವಂತೆ ಗಲಾಟೆ ಮಾಡಿ ಸೂಳೆ ಮುಂಡೆ ಬೋಳಿಮುಂಡೆ ಎಂದು ಬೈದಾಡಿದ್ದು , ಚಾಸಾ.1 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಹಾಗೂ ಚಾಸಾ.1 ರವರಿಗೆ ಕುತ್ತಿಗೆ ಹಿಸುಕಿ ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಪುರಾವೆಗೊಳಿಸಬೇಕಾಗಿರುತ್ತದೆ.

9. ಅಭಿಯೋಜನೆಯವರು ಚಾಸಾ.1 ರವರನ್ನು ಫ್ರಾಸಾ.1 ಎಂದು, ಚಾಸಾ.2 ರವರನ್ನು ಫ್ರಾಸಾ.2 ಎಂದು ಹಾಗೂ ಚಾಸಾ.3 ರವರನ್ನು ಫ್ರಾಸಾ.3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಚಾಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ಫ್ರಾಸಾ.1 ರವರ ಸಹಿಯನ್ನು ನಿಪಿ.1(ಎ) ಎಂದು, ಸ್ಥಳ ಮಹಜರನ್ನು ನಿಪಿ.2 ಎಂದು, ಫ್ರಾಸಾ.1 ರವರ ಸಹಿಯನ್ನು ನಿ.ಪಿ-2(ಎ) ಎಂದು, ಕಚ್ಚಾ ನಕಾಶೆಯನ್ನು ನಿಪಿ.3 ಎಂದು, ಫ್ರಾಸಾ.1 ರವರ ಸಹಿಯನ್ನು ನಿ.ಪಿ-3(ಎ)ಎಂದು, ಫ್ರಾಸಾ.1 ರವರ ಹೇಳಿಕೆಯನ್ನು ನಿಪಿ.4 ಎಂದು, ಫ್ರಾಸಾ.2 ರವರ ಹೇಳಿಕೆಯನ್ನು ನಿಪಿ.5 ಎಂದು ಹಾಗೂ ಫ್ರಾಸಾ.3 ರವರ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಿಕೊಂಡಿರುತ್ತಾರೆ.

10. ಫ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರಿಗೆ ಚಾಸಾ.2 ರವರು ಅವರ ತಂದೆ ಚಾಸಾ.3 ಅವರ ತಾಯಿ ಚಾಸಾ.4 ರಿಂದ 7, 9 ಮತ್ತು 10 ರವರು ಪರಿಚಯಸ್ಥರು ಎಂದು, ಅವರಿಗೆ ಮತ್ತು 1 ನೇ ಆರೋಪಿಗೆ ಮದುವೆ 26.11.2017 ರಂದು ಧರ್ಮಪುರದಲ್ಲಿ ಆಗಿರುತ್ತದೆ ಎಂದು ಮದುವೆ ಕಾಲಕ್ಕೆ ಯಾವುದೇ ಕೂಡುವ ತೆಗೆದುಕೊಳ್ಳುವ ಮಾತುಕತೆಯಾಗಿರಲಿಲ್ಲ ಮದುವೆಯಾದ ನಂತರ ಅವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದು, ಗರ್ಭಿಣಿಯಾದ ನಂತರ ಅವರು ಬಬ್ಬೂರಿಗೆ ಬಂದಿರುತ್ತಾರೆಂದು ಆರೋಪಿಯು ಅವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿಲ್ಲವೆಂದು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಕತ್ತು ಹಿಚುಕಿ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿಲ್ಲ ಅವರಿಗೆ ಹಣ ಕೊಡುವಂತೆ ಗಲಾಟೆ ಮಾಡಿಲ್ಲ ಅವರು ಪೊಲೀಸರಿಗೆ ನಿಪಿ.1 ರಂತೆ ದೂರು ನೀಡಿಲ್ಲವೆಂದು ನಿಪಿ.1(ಎ) ಸಹಿ ಅವರದೆಂದು ನಿಪಿ.2 ಮತ್ತು 3 ಮಹಜರ್ ಮತ್ತು ನಕಾಶೆ ಎಂದು ನಿಪಿ.2(ಎ) ಮತ್ತು 3(ಎ) ಸಹಿಗಳು ಅವರದೆಂದು 8 ವರ್ಷಗಳ ಹಿಂದೆ ಅವರ ಮನೆಯ ಹತ್ತಿರ ಸಹಿ ಮಾಡಿರುತ್ತಾರೆಂದು

ಯಾವ ವಿಚಾರಕ್ಕೆ ಸಹಿ ಮಾಡಿರುತ್ತಾರೆಂದು ಗೊತ್ತಿರುವುದಿಲ್ಲವೆಂದು ಪೊಲೀಸರು ಯಾವುದೇ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಸ್ತು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಅವರು ಪೊಲೀಸರಿಗೆ ಮರು ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ.

**11.** ಫ್ರಾಸಾ.2 ಮತ್ತು 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಮತ್ತು ಚಾಸಾ.1 ರವರ ಮದುವೆ ದಿಃ26.11.2017 ರಂದು ಧರ್ಮಪುರದಲ್ಲಿ ಆಗಿರುತ್ತದೆ ಎಂದು ಮದುವೆಕಾಲಕ್ಕೆ ಯಾವುದೇ ಕೊಡುವ ತೆಗೆದುಕೊಳ್ಳುವ ಮಾತುಕತೆಯಾಗಿರಲಿಲ್ಲ ಮದುವೆಯಾದ ನಂತರ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದು ಆರೋಪಿ ಚಾಸಾ.1 ರವರಿಗೆ ಮಾನಸಿಕೆ ಮತ್ತು ದೈಹಿಕ ಹಿಂಸೆ ನೀಡಿಲ್ಲ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಕತ್ತು ಹಿಚುಕಿ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿಲ್ಲ ಚಾಸಾ.1 ರವರಿಗೆ ಹಣ ಕೊಡುವಂತೆ ಗಲಾಟೆ ಮಾಡಿಲ್ಲ ಅವರು ಪೊಲೀಸರಿಗೆ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ.

**12.** ಅಭಿಯೋಜನೆಯವರು ಫ್ರಾಸಾ.1 ರಿಂದ 3 ರವರು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದಾರೆಂದು ಅವರನ್ನು ಪಾಟೀ ಸವಾಲು ಮಾಡಿದಾಗ್ಯೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ ಮತ್ತು ಅವರು ದೋಷಾರೋಪಣೆಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

13. ಈ ಪ್ರಕರಣದಲ್ಲಿ ದೂರುದಾರ ಮತ್ತು ಗಾಯಾಳುಗಳಾದಂತಹ ಫ್ರಾಸಾ.1 ರಿಂದ 3 ರವರು ತಮಗಾದ ಗಾಯಗಳನ್ನು ಮತ್ತು ಘಟನೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಆದ್ದರಿಂದ ಉಳಿದ ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಅಭಿಯೋಜನೆಯವರು ಫ್ರಾಸಾ.1 ರಿಂದ 3 ರವರನ್ನು ಪ್ರತಿಕೂಲ ಸಾಕ್ಷಿ ಎಂದು

ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಅಂಶಗಳು ಫ್ರಾಸಾ.1 ರಿಂದ 3 ರವರ ಸಾಕ್ಷ್ಯದಲ್ಲಿ ಹೊರ ಬಂದಿರುವುದಿಲ್ಲ ಭಾರತೀಯ ಸಾಕ್ಷ್ಯ ಅಧಿನಿಯಮ **1872** ರ ಕಲಂ **154** ರ ಅಡಿಯಲ್ಲಿ ಫ್ರಾಸಾ.**1** ರಿಂದ 3 ರವರ ಸಾಕ್ಷ್ಯವನ್ನು ವಿಶ್ಲೇಷಿಸಿದಾಗ  ವಿರುದ್ಧ ಸಾಕ್ಷಿದಾರರು ಘಟನೆಗೆ ಸಂಬಂಧಿಸಿದಂತೆ ಏನನ್ನು ಹೇಳದಿರುವಾಗ ಉಳಿದ ಸಾಕ್ಷಿದಾರರ ಸಾಕ್ಷ್ಯವು ಉಪಯೋಗವಿಲ್ಲದ್ದು ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪುಜನ್ಯ **Kathi Odhabhai Bhimabhai V/s**. **State of Gujarath**, **AIR** 1993 **S.C** 1193 ಪ್ರಕರಣದಲ್ಲಿ  ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಫ್ರಾಸಾ.1 ರಿಂದ 3 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಿಂದ ಉಪಯೋಗಕ್ಕೆ ಬಾರದಂತೆ ಇದೆ. ಆದ್ದರಿಂದ ಇಂತಹ ಘಟನೆ ನಡೆದಿದೆ ಎಂಬುದನ್ನು ನಂಬುವಂತಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯವರು ಆರೋಪಿಯ ವಿರುದ್ಧ ಹೊರಿಸಲಾದ ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ನಿರ್ಣಯಿಸಿ ಅಂಶ **1** ರಿಂದ **5** ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**14.ಅಂಶ ನಂ.6ಃ** ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

## ಆದೇಶ

ಆರೋಪಿಯ ಮೇಲಿನ ಆಪಾದನೆ ಸಾಬೀತಾಗಿರುವುದಿಲ್ಲ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)** ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯ ವಿರುದ್ಧ ಹೊರಿಸಲಾದ ಭಾರತೀಯ ನ್ಯಾಯ ಸಂಹಿತೆಯ ಕಲಂ. ಭಾ.ದ.ಸಂ ಭಾ.ಧ.ಸಂ ಕಲಂ 323, 504, 506, 498(ಎ) ಹಾಗೂ 3 ಮತ್ತು 4 ಡಿ. ಪಿ ಆಕ್ಟ್ ರಡಿಯಲ್ಲಿ ಎಸಗಿದ ಅಪರಾಧಗಳಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಪಿ. ಎಫ್ ನಂ.**73/2020** ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮದುವೆ ಸಮಯದಲ್ಲಿ ತೆಗೆದಿರುವ ಎರಡು ಫೋಟೋಗಳು ಪಿರ್ಯಾದಿದಾರರಿಗೆ ಹಿಂದಿರುಗಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿಃ 01.06.2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

## ಅನುಬಂಧ

**I ಪಿರ್ಯಾದುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–**

ಪ್ರಾಸಾ–1 ಃ ಮಮತ

| | | |
|---|---|---|
| ಫ್ರಾಸಾ–2 | ಃ | ತಿಪ್ಪೆಸ್ವಾಮಿ |
| ಫ್ರಾಸಾ–3 | ಃ | ನೇತ್ರಾವತಿ |

**II ಪಿರ್ಯಾದುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–**

| | | |
|---|---|---|
| ನಿ.ಪಿ–1 | ಃ | ದೂರು |
| ನಿ.ಪಿ–1(ಎ) | ಃ | ಫ್ರಾಸಾ.1 ರವರ ಸಹಿ |
| ನಿ.ಪಿ–2 | ಃ | ಮಹಜರ್ |
| ನಿ.ಪಿ–2(ಎ) | ಃ | ಫ್ರಾಸಾ.1 ರವರ ಸಹಿ |
| ನಿ.ಪಿ–3 | ಃ | ಕಚ್ಚಾ ನಕಾಶೆ |
| ನಿ.ಪಿ–3(ಎ) | ಃ | ಫ್ರಾಸಾ.1 ರವರ ಸಹಿ |
| ನಿ.ಪಿ–4 | ಃ | ಫ್ರಾಸಾ.1 ರವರ ಹೇಳಿಕೆ |
| ನಿ.ಪಿ–5 | ಃ | ಫ್ರಾಸಾ.2 ರವರ ಹೇಳಿಕೆ |
| ನಿ.ಪಿ–6 | ಃ | ಫ್ರಾಸಾ.3 ರವರ ಹೇಳಿಕೆ |

**III ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–**

–ಇಲ್ಲಾ–

**IV ಆರೋಪಿಯ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–**

–ಇಲ್ಲಾ–

**V ಅಭಿಯೋಜನೆಯ ಪರ ಮುದ್ದೆ ಮಾಲುಗಳು –**

–ಇಲ್ಲಾ–

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

Visit ecourts.gov.in for updates or download mobile app “eCourts Services” from Android or iOS

SUJATHA SUVARNA B
Digitally signed by SUJATHA SUVARNA B
Date: 2026.06.06 13:49:51 +0530